ಮೂಲ ದಾವೆ ನಂ.65/2020

PW-1

ದಿನಾಂಕಃ 11-02-2025.

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ ಃ**

ಈ ದಾವೆಯನ್ನು ಮಲ್ಲಿಕಾರ್ಜುನ, ಬಲಭೀಮ ಮತ್ತು ಶರಣು ಇವರ ವಿರುದ್ದ ಸಲ್ಲಿಸಿರುತ್ತೇನೆ. ಸದರಿ ದಾವೆಯನ್ನು ನಾನು ಮತ್ತು ನಮ್ಮ ಅಕ್ಕ ದೇವಿಂದ್ರಮ್ಮ ಸೇರಿ ದಾವೆ ಸಲ್ಲಿಸಿರುತ್ತೇವೆ. ಸದರಿ ದಾವೆಯನ್ನು ಒಟ್ಟು 22 ಎಕರೆ ಜಮೀನುಗಳ ಮೇಲೆ ಹಾಕಿರುತ್ತೇವೆ. ಸದರಿ ಜಮೀನುಗಳ ಪೈಕಿ ಸ.ನಂ. 29 ರಲ್ಲಿ ವಿಸ್ತೀರ್ಣ 9 ಎಕರೆ 4 ಗುಂಟೆ ಜಮೀನು ಇರುತ್ತದೆ ಸ.ನಂ.85 ರಲ್ಲಿ ಸಣ್ಣ ಸಣ್ಣ ಪಟ್ಟಿಗಳಿದ್ದು ಅದರ ವಿಸ್ತೀರ್ಣಗಳ ಎಷ್ಟು ಇರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಆ ಸರ್ವೆ ನಂಬರಿನಲ್ಲಿ ಒಟ್ಟು ಐದು ಪಟ್ಟಿಗಳಿರುತ್ತವೆ. ದಾವಾ ಆಸ್ತಿಗಳ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳ ಪೈಕಿ ಯಾವುದೇ ಸರ್ವೆ ನಂಬರಿನ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ನಾನು ಪ್ರತಿವಾದಿಯರಿಗೆ ಸಂಬಂಧ ಹೊಂದಿರುವುದಿಲ್ಲ ಆ ಕಾರಣಕ್ಕಾಗಿ ನನಗೆ ದಾವಾ ಆಸ್ತಿಗಳ ಚೆಕ್ ಬಂದಿ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಗಳ ಪೈಕಿ ಸ.ನಂ. 280 ರಲ್ಲಿನ 1 ಎಕರೆ 38 ಗುಂಟೆ ಜಮೀನು ಕೆಂಪು ಭೂಮಿಯಾಗಿರುತ್ತವೆ. ಉಳಿದ ದಾವಾ ಅಸ್ತಿಗಳ ಜಮೀನು ಕಪ್ಪು ಭೂಮಿಯಾಗಿರುತ್ತವೆ. ಅಂದರೆ 9 ಜಮೀನುಗಳು ಕಪ್ಪು ಭೂಮಿಯಾಗಿರುತ್ತವೆ. ದಾವಾ ಅಸ್ತಿ ಮನೆಒಂದು ಇರುತ್ತದೆ ಅದರ ನಂಬರ ನನಗೆ ಹೇಳಲು ಬರುವುದಿಲ್ಲ. ಅದರ ಅಳತೆ ಮತ್ತು ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆಯ ಕೊಣೆಗಳ ಅಳತೆ ನನಗೆ ಹೇಳಲು ಬರುವುದಿಲ್ಲ. ಅಲ್ಲಿ ಒಟ್ಟು ನಾಲ್ಕು ಕೋಣೆಗಳಿರುತ್ತವೆ. ಪ್ರತಿವಾದಿಂದರಿಗೆ ನಾನು ಸಂಬಂಧಿಕನಾರಿಲ್ಲದ ಕಾರಣ ನನಗೆ ಆ ಮನೆಯ ಅಳತೆ ಹೇಳಲು ಆಗುತ್ತಿಲ್ಲ ಎಂದರೆಸರಿಯಲ್ಲ.

ನನ್ನ ಮದುವೆ ಸುಮಾರು 30 ವರ್ಷಗಳ ಹಿಂದೆ ಆಗಿರುತ್ತದೆ. 2 ನೇ ವಾದಿ ದೇವಿಂದ್ರಮ್ಮ ಇವರ ಮದುವೆ ಅಂದಾಜು 50 ವರ್ಷಗಳ ಹಿಂದೆ ಆಗಿರುತ್ತದೆ. ನಮ್ಮ ಮದುವೆಯಾದ ನಂತರ ನಾನು ಮತ್ತು ದೇವಿಂದ್ರಮ್ಮ ನಮ್ಮ ಗಂಡನ ಮನೆಯಲ್ಲಿ ಇರುತ್ತೇವೆ ಎಂದರೆ ಸಾಕ್ಷಿಯು ನಾನು ತವರು ಮನೆಗೆ ಹೋಗಿ ಬಂದು ಮಾಡುತ್ತೇವೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.